


ಎಡದಿಂದ ಬಲಕ್ಕೆ

1. ವಸಂತ ಸಮಯದಲ್ಲಿ ಸದಾ ಆನಂದವೇ ಬಿಡಿ (3)
3. ಆದಾಯವಿಲ್ಲದ ಕೆಲಸಕ್ಕೆ ಬೀಳ್ಕೊಡುಗೆ (3)
4. ಬಲಿತ ಹಲಸಿನ ಮರದ ತಾಳವಾದ್ಯ (3)
6. ಅರಣ್ಯವನ್ನು ರಕ್ಷಿಸಲೊಂದು ಸುತ್ತುಗೋಡೆ (4)
7. ಪಾರಾವಾರವನ್ನು ನೋಡ ಬಂದವರ ಸಂಬಂಧಿ ಸಮೂಹ (4)
9. 'ದೇವತೆ ಕೇಳಿದ್ದು' –ಉತ್ತರಿಸುವುದು ಸುಲಭವಲ್ಲ (4)
11. ಕಜ್ಜಾಯಕ್ಕೆ ಕೈಯಿಡಹೋದರೆ ಇನ್ನೂ ಹಣ್ಣಾಗದ ಸಾಂಬಾರ (4)
15. ಕ್ಷೀಣ ದನಿ ಕೇಳುತ್ತಿದೆ, ಯಾವ ದಿಕ್ಕಿನಿಂದ? (3)
16. ಬರಿಕೈ ತೋರಿದವನಿಗೆ ಹಿಂದಿರುಗಿಸಿದ್ದು ಜೋಳದ ರೊಟ್ಟಿ (3)
17. ಕರೆದು ತೋರಿಸಿದ ವಸ್ತು ಕಪ್ಪು ಬಣ್ಣದ್ದು (3)

ಮೇಲಿಂದ ಕೆಳಕ್ಕೆ

1. ಸಮಯ ಹೇಗೇ ಇರಲಿ, ತಾಳ್ಮೆ ಇರಲಿ (3)
2. ತುಸು ತುಸುವೇ ಆದರೂ ನಿರಂತರ (3)
3. ಕೋವಿ ಹಿಡಿದವರ ಮನಸಿನದು ಕೆಟ್ಟರೂಪ (3)
5. ಹರಿಯಲಿ ಬಿಡಿ, ಆಲೋಚನೆಯ ಅಲೆ (3)
6. ಅಲ್ಲಿಯ ಜನರಿಗೆಲ್ಲ ಇದೊಂದೇ ನಿವಾಸ (3)
8. ರಾಜ್ಯ ಇಲ್ಲದಿದ್ದರೇನು? ಮೆತ್ತನೆಯ ಹಾಸು ಇದೆ (3)
10. ಪರಿಮಳದ ಬೆಲೆ ಕೇಳಿದ್ದು ಭಾರೀ ತಪ್ಪಾಯಿತು (3)
12. 'ಬಡಾ ಭಾಯಿ' ಬಗೆಗಿನ ಜಂಬವೆಲ್ಲ ತಲೆಕೆಳಗು (3)
13. ಅಣ್ಣನ ಕರೆಯನ್ನೇ ಅನುಕರಿಸಿದ್ದು? (3)
14. ಬರೆದು ಮುಗಿಸುವವೇಳೆಗೆ ಎಲ್ಲ ಖಾಲಿ (3)

## ಪದಬಂಧ : 22-10-2009ರ ಉತ್ತರಗಳು

ಎಡದಿಂದ ಬಲಕ್ಕೆ: 1. ಅವಸಾನ; 3. ಪ್ರಧಾನ; 4. ಗಡವ; 6. ಲಕ್ಷಾಂತರ; 7. ಆವರಣ; 8. ಬಲರಾಮ; 10. ರಸಗುಲ್ಲ; 12. ಅರಿಭಯ; 14. ಶಿವಾಲಯ; 16. ರುದ್ರಾಕ್ಷಿ; 17. ಜವ್ವನೆ; 18. ತಪೋವನ.

ಮೇಲಿಂದ ಕೆಳಕ್ಕೆ: 1. ಅನಿಲ; 2. ನಗರ; 3. ಪ್ರಕರಣ; 5. ವಶೀಲ; 7. ಆಡಂಬರ; 9. ಮಹಾಲಯ; 11. ಗುಟುರು; 13. ಮರಿಯಾನೆ; 14. ಶಿಕ್ಷಿತ; 15. ಯಜನ.

# ಪ್ರಕೃತಿ ವಿಸ್ಮಯ

## 'ಅಮೆಜಾನ್'-ಅದೇಕೆ ಅತ್ಯದ್ಭುತ?

ಅಮೆಜಾನ್ ನದಿ. ಅದು ಅತ್ಯದ್ಭುತ ಅಷ್ಟೇ ಅಲ್ಲ; ಅಪ್ರತಿಮ, ಅದ್ವಿತೀಯ ಕೂಡ. ದಕ್ಷಿಣ ಅಮೆರಿಕ ಖಂಡದ 'ಆ್ಯಂಡಿಸ್' ಪರ್ವತ ಪಂಕ್ತಿಯ ಉನ್ನತ ಶಿಖರವೊಂದರಲ್ಲಿ ನಿಶ್ಶಬ್ದವಾಗಿ ಉದ್ಭವಿಸಿ ಧುಮುಕಿ ನೆಲದತ್ತ, ಧುಮುಕಿ ಕಡಲಿನತ್ತ ಪ್ರವಹಿಸುತ್ತಿರುವ ಈ ನದಿಯನ್ನು ಯಾವ ಗುಣದಲ್ಲೂ ಬೇರಾವ ನದಿಗೂ ಹೋಲಿಸುವುದು ಸಾಧ್ಯವಿಲ್ಲ. ಹೀಗೆ 'ಕಡಲಿನಂಥ ನದಿ'ಯಾಗಿರುವುದರಿಂದಲೇ ಅಮೆಜಾನ್ ಅತ್ಯದ್ಭುತ ನದಿ. ಈ ನದಿಯ ಗುಣ–ಲಕ್ಷಣಗಳನ್ನು ನೀವೇ ಗಮನಿಸಿ.

* ಅಮೆಜಾನ್ ನದಿಯ ಉದ್ದ 6450 ಕಿ.ಮೀ. ಉದ್ದದಲ್ಲಿ ಮಾತ್ರ ಈ ನದಿಯದು ದ್ವಿತೀಯ ಸ್ಥಾನ. ಅಲ್ಲೂ ಪ್ರಥಮ ಸ್ಥಾನದಲ್ಲಿರುವ 'ನೈಲ್' ನದಿಗಿಂತ 250 ಕಿ.ಮೀ.ನಷ್ಟೇ ಕಡಿಮೆ. ದಡದಿಂದ ದಡಕ್ಕೆ ಅದರ ಅಗಲ ಹನ್ನೊಂದು ಕಿ.ಮೀ. ಮೀರುವ ಸ್ಥಳಗಳು ಹೇರಳ. ಪ್ರವಾಹಕಾಲದಲ್ಲಂತೂ ಅಮೆಜಾನ್‌ನ ಅಗಲ ನಲವತ್ತು ಕಿ.ಮೀ. ಅನ್ನೂ ಮೀರುತ್ತದೆ.

* ಅಮೆಜಾನ್ ಅನ್ನು ಸೇರುವ ಉಪನದಿಗಳು ಒಂದು ಸಾವಿರದ ಒಂದು ನೂರು! ಆ ಪೈಕಿ ಹದಿನೇಳು ಉಪನದಿಗಳು 1600 ಕಿ.ಮೀ.ಗಿಂತ ಅಧಿಕ ಉದ್ದ ಇವೆ, ಆ ಗುಂಪಿಗೇ ಸೇರಿದ 'ಪರಾನಾ' ಮತ್ತು 'ಮಡೈರಾ'– ಗಳಂತೂ ಪ್ರಪಂಚದ ಪ್ರಥಮ ಹತ್ತು ಅತಿ ದೀರ್ಘ ನದಿಗಳ ಪಟ್ಟಿಯಲ್ಲಿವೆ. ಅಮೆಜಾನ್ ಮತ್ತು ಅದರ ಎಲ್ಲ ಉಪನದಿಗಳ ಒಟ್ಟು ಉದ್ದ ಎಂಬತ್ತು ಸಾವಿರ ಕಿ.ಮೀ.! ಈ ನದೀ ಜಾಲದ ಒಟ್ಟು ಜಾಲಾನಯನ ಪ್ರದೇಶದ ಒಟ್ಟು ವಿಸ್ತಾರ ಎಪ್ಪತ್ತೈದು ಲಕ್ಷ ಚದರ ಕಿ.ಮೀ.!

* ಇಡೀ ಜಗತ್ತಿನ ನದಿ ನೀರಿನ ಶೇಕಡ ಇಪ್ಪತ್ತು ಭಾಗ ಅಮೆಜಾನ್‌ನಲ್ಲಿ ಹರಿಯುತ್ತಿದೆ. ಈ ನದಿಯ ಮೂಲಕ ಪ್ರತಿ ದಿನ ಅಟ್ಲಾಂಟಿಕ್ ಸಾಗರಕ್ಕೆ ಬೀಳುತ್ತಿರುವ ನೀರು ಕಲ್ಪನಾತೀತ: ಪ್ರತಿ ಸೆಕೆಂಡ್‌ಗೆ ಏಳೂವರೆ ದಶಲಕ್ಷ ಘನ



ಅಡಿ! ಎಂದರೆ ಪ್ರತಿ ಹದಿಮೂರು ಸೆಕೆಂಡ್ ಒಂದು ಟಿ.ಎಂ.ಸಿ. ಅಡಿ ನೀರು! ಈ ನದಿಯ ಮೂಲಕ ಪ್ರತಿ ದಿನ ಕಡಲಿಗೆ ಬೀಳುತ್ತಿರುವ ಕಲ್ಲು ಮಣ್ಣು ಮರಳಿನ ಪ್ರಮಾಣ ಮುವ್ವತ್ತು ಲಕ್ಷ ಟನ್!

* ಅಮೆಜಾನ್‌ನ 'ಆಳ'ವೂ ವಿಪರೀತ. ಎಷ್ಟೆಂದರೆ ಬೃಹದ್ಗಾತ್ರದ ಸಾಗರಗಾಮೀ ಹಡಗುಗಳೇ ಈ ನದಿಯಲ್ಲಿ ಮೂರೂವರೆ ಸಾವಿರ ಕಿ.ಮೀ. ದೂರ ಒಳನಾಡಿಗೆ ಬರಬಲ್ಲವು. ಈ ನದಿ ತನ್ನ ಒಡಲಲ್ಲಿ ಅತಿ ವೈವಿಧ್ಯದ ಅಲ್ಲಿನದೇ ವಿಶಿಷ್ಟ ಅಪಾರ ಪ್ರಾಣಿವರ್ಗಗಳನ್ನು– ಮತ್ಸ್ಯ ಸರೀಸೃಪ ಸ್ತನಿ ಇತ್ಯಾದಿ– ಧರಿಸಿದೆ. ಧರೆಯ ಅತ್ಯುತ್ಕೃಷ್ಟ ಅತಿ ವಿಸ್ತಾರ ವೃಷ್ಟಿವನ 'ಅಮೆಜೋನಿಯಾ'ವನ್ನೂ ಪೋಷಿಸುತ್ತಿದೆ.

ಎಂಥ ನದಿ! ಎಂಥ ಅದ್ಭುತ! ಅಲ್ಲವೇ?

■ ಎನ್. ವಾಸುದೇವ್